ಶ್ರೀ ಮಂಜುನಾಥ ಸಿ. ಕುನ್ನೂರು:- ಸನ್ಮಾನ್ಯ ಅಧ್ಯಕ್ಷರೆ, ಶಿಗ್ಗಾಂವಿ ತಾಲ್ಲೂಕಿನಲ್ಲಿ ಇಂಡಸ್ಟ್ರೀಯಲ್ ಮಳಿಗೆಗಳನ್ನು ಒಂದು ವರ್ಷದ ಹಿಂದೆಯೇ ಕಟ್ಟಿದ್ದು ಸಣ್ಣ ಪುಟ್ಟ ಕೆಲಸಗಳಾದ ಕಿಟಕಿಗಳಿಗೆ ಗಾಜುಗಳನ್ನು ಹಚ್ಚುವ ಕೆಲಸ ಮಾತ್ರ ಬಾಕಿ ಇದೆಯೆಂದು ಮಾನ್ಯ ಮಂತ್ರಿಯವರು ತಮ್ಮ ಉತ್ತರದಲ್ಲಿ ತಿಳಿಸಿದ್ದಾರೆ. ಆದಷ್ಟು ಬೇಗ ಬಾಕಿ ಉಳಿದಿರುವ ಕೆಲಸವನ್ನು ಮಾಡಿ ಉದ್ದಿಮೆದಾರರಿಗೆ ಮಳಿಗೆಗಳನ್ನು ಹಂಚತಕ್ಕಂಥ ಕೆಲಸ ಮಾಡಬೇಕು. ಆಮೇಲೆ ಸ್ಥಳೀಯರಿಗೆ ಮಾತ್ರ ಈ ಮಳಿಗೆಗಳನ್ನು ಕೊಡಲಾಗುತ್ತದೆಯೇ ಎಂದು ಕೇಳಿರುವುದಕ್ಕೆ ''ಹೌದು'' ಮಾನ್ಯ ಸಚಿವರು ಉತ್ತರದಲ್ಲಿ ಹೇಳಿದ್ದಾರೆ. ನನಗೆ ತಿಳಿದ ಮಟ್ಟಿಗೆ ಹುಬ್ಬಳ್ಳಿಯಿಂದಲೂ ಶಿಗ್ಗಾಂವಿಯಲ್ಲಿ ಮಳಿಗೆಗಳನ್ನು ಕೇಳಿದ್ದಾರೆಂದು ತಿಳಿದು ಬಂದಿದೆ, ಆದುದರಿಂದ, ಈ ಮಳಿಗೆಗಳನ್ನು ಸ್ಥಳೀಯರಿಗೆ ಮಾತ್ರ ಕೊಡಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎ. ಮೊಹಿದ್ದೀನ್:- ಮಾನ್ಯ ಅಧ್ಯಕ್ಷರೆ, ಸ್ಥಳೀಯರಿಗೆ ಪ್ರಾಶಸ್ತ್ಯ ಕೊಡಬೇಕೆನ್ನುವ ಉದ್ದೇಶದಿಂದಲೇ ತಾಲ್ಲೂಕು ಮಟ್ಟದಲ್ಲಿ ಕೈಗಾರಿಕಾ ವಸಾಹತುಗಳನ್ನು ಮಾಡಲಾಗಿರುವುದರಿಂದ ಸ್ಥಳೀಯರಿಗೆ ಆದ್ಯತೆ ಕೊಡಲಾಗುತ್ತದೆ. ಮಳಿಗೆಗಳನ್ನು ಅಲಾಟ್ ಮಾಡಿದ ತಕ್ಷಣ ಅವುಗಳಿಗೆ ಕಿಟಕಿ ಗಾಜುಗಳನ್ನು ಹಾಕುವ ಕೆಲಸವನ್ನು ನಾವು ಕೈಗೆತ್ತಿಕೊಳ್ಳುತ್ತೇವೆ. ಇದರ ಜೊತೆಗೆ ತಮ್ಮ ಕ್ಷೇತ್ರದ ಸವಣೂರು ಗ್ರಾಮದ ಹತ್ತಿರವೂ ಕೈಗಾರಿಕಾ ವಸಾಹತಿಗಾಗಿ 15 ಎಕರೆ ಜಮೀನನ್ನು ವಶಪಡಿಸಿಕೊಂಡಿದ್ದೇವೆ. ನಮ್ಮ ಕಾರ್ಪೊರೇಷನ್ ಮೂಲಕ ತಾಲ್ಲೂಕು ಮಟ್ಟಗಳಲ್ಲಿ ಕೈಗಾರಿಕಾ ವಸಾಹತುಗಳನ್ನು ಡೆವಲಪ್ ಮಾಡಿ ಅವುಗಳ ಮೇನ್‌ಟೆನೆನ್ಸ್‌ನನ್ನು ಜಿಲ್ಲಾ ಪಂಚಾಯಿತಿಗೆ ಕೊಡಬೇಕೆನ್ನುವ ಬಗ್ಗೆ ಅಧಿಕಾರಿಗಳೊಡನೆ ಚರ್ಚೆ ಮಾಡಲಾಗುತ್ತಿದೆ. ಈ ವಿಚಾರದಲ್ಲಿ ನಿರ್ಣಯ ತೆಗೆದುಕೊಂಡ ಮೇಲೆ ಮಾನ್ಯ ಸದಸ್ಯರಿಗೆ ತಿಳಿಸಲಾಗುತ್ತದೆ.

ಶ್ರೀ ಮಂಜುನಾಥ ಸಿ. ಕುನ್ನೂರ್:- ಮಾನ್ಯ ಅಧ್ಯಕ್ಷರೆ, ಸವಣೂರಿನಲ್ಲಿ 10 ವರ್ಷಗಳ ಹಿಂದೆಯೇ 15 ಎಕರೆಯಷ್ಟು ಜಮೀನನ್ನು ಸ್ವಾಧೀನಕ್ಕೆ ತೆಗೆದುಕೊಂಡಿದ್ದರೂ ಇನ್ನೂ ಕೆಲಸವನ್ನು ಪ್ರಾರಂಭ ಮಾಡಿರುವುದಿಲ್ಲ. ಆದುದರಿಂದ, ತಾವು ಕೂಡಲೇ ಆ ಕೆಲಸವನ್ನು ಪ್ರಾರಂಭ ಮಾಡಬೇಕೆಂದು ತಮ್ಮ ಮುಖೇನ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎ. ಮೊಹಿದ್ದೀನ್:- ಆಗಬಹುದು.

ವಿಷಯ:- ಬೇಲೂರು ತಾಲ್ಲೂಕಿನಲ್ಲಿ ಮೆಟ್ರಿಕ್ ಪೂರ್ವ ಹಾಸ್ಟೆಲ್ ಸ್ಥಾಪನೆ.

281 (1749) **ಶ್ರೀ ಹೆಚ್.ಕೆ. ಕುಮಾರಸ್ವಾಮಿ.(ಬೇಲೂರು):-** ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೇಲೂರು ತಾಲ್ಲೂಕಿನಲ್ಲಿರುವ ಮೆಟ್ರಿಕ್ ಪೂರ್ವ ಬಾಲಕರ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳಿಗೆ ಪ್ರವೇಶ ಬಯಸಿ ಹೆಚ್ಚು ಮಕ್ಕಳ ಅರ್ಜಿಗಳು ಬಂದಿರುವುದು ನಿಜವೆ?

ಆ) ಹಾಗಿದ್ದಲ್ಲಿ, ಈಗಿನ ಮಂಜೂರಾತಿ ಸಂಖ್ಯೆ ಹೆಚ್ಚಿಸಲಾಗುವುದೇ? ಅಥವಾ ಹೊಸ ಹಾಸ್ಟೆಲ್-ಗಳನ್ನು ಪ್ರಾರಂಭಿಸಲಾಗಿದೆಯೇ?

ಇ) ಬೇಲೂರು ಪಟ್ಟಣದಲ್ಲಿ ಮೆಟ್ರಿಕ್ ನಂತರದ ಹಾಸ್ಟೆಲ್ ಇಲ್ಲದಿರುವುದರಿಂದ ಅಲ್ಲಿಗೆ ಹಾಸ್ಟೆಲ್ ಮಂಜೂರು ಮಾಡಲಾಗುವುದೆ?

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ (ಸಮಾಜ ಕಲ್ಯಾಣ ಸಚಿವರು):-

ಆ) ಹೌದು, ಬೇಲೂರು ತಾಲ್ಲೂಕಿನಲ್ಲಿರುವ ಎಲ್ಲಾ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಲ್ಲಿ ಮಂಜೂರಾತಿ ಸಂಖ್ಯೆಗಿಂತ ಹೆಚ್ಚಾಗಿ ಪ್ರವೇಶಾವಕಾಶ ಕೋರಿ ವಿದ್ಯಾರ್ಥಿಗಳು ಅರ್ಜಿ ಹಾಕಿರುತ್ತಾರೆ.

ಆ) ಬೇಲೂರು ತಾಲ್ಲೂಕಿನಲ್ಲಿರುವ ನಾಲ್ಕು ಮೆಟ್ರಿಕ್‌ಪೂರ್ವ ವಿದ್ಯಾರ್ಥಿನಿಲಯಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಲಾಗಿದೆ.

1. ಸಾರ್ವಜನಿಕ ಬಾಲಕರ ವಿದ್ಯಾರ್ಥಿನಿಲಯ, ಬೇಲೂರು.	75 ರಿಂದ 100
2. ಸಾರ್ವಜನಿಕ ಬಾಲಕಿಯರ ವಿದ್ಯಾರ್ಥಿನಿಲಯ, ಬೇಲೂರು.	55 ರಿಂದ 75
3. ಸಾರ್ವಜನಿಕ ಬಾಲಕರ ವಿದ್ಯಾರ್ಥಿನಿಲಯ, ಹಳೇಬೀಡು.	50 ರಿಂದ 75
4. ಸಾರ್ವಜನಿಕ ಬಾಲಕರ ವಿದ್ಯಾರ್ಥಿನಿಲಯ, ಹಗರೆ.	25 ರಿಂದ 50

ಅಲ್ಲದೇ, 1996-97ನೇ ಸಾಲಿನಲ್ಲಿ ಹಾಸನ ಜಿಲ್ಲೆ ಬೇಲೂರು ತಾಲ್ಲೂಕಿಗೆ ಹೊಸ ಮೆಟ್ರಿಕ್-ಪೂರ್ವ ವಿದ್ಯಾರ್ಥಿನಿಲಯವನ್ನು ಮಂಜೂರು ಮಾಡಲು ಇತರೇ ಪ್ರಸ್ತಾವನೆಗಳೊಂದಿಗೆ ಅವಶ್ಯಕತೆ ಮತ್ತು ಆದ್ಯತೆ ಮೇಲೆ ಪರಿಗಣಿಸಿ ಪರಿಶೀಲಿಸಲಾಗುತ್ತದೆ.

ಇ) ಬೇಲೂರು ಪಟ್ಟಣದಲ್ಲಿ ಕಾಲೇಜು ವಿದ್ಯಾರ್ಥಿನಿಲಯವನ್ನು ಮಂಜೂರು ಮಾಡುವ ಬಗ್ಗೆ ಪರಿಶೀಲಿಸಲಾಗುವುದು.

ಶ್ರೀ ಹೆಚ್.ಕೆ. ಕುಮಾರಸ್ವಾಮಿ:- ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಸಮಾಧಾನ ಉತ್ತರವನ್ನು ಕೊಟ್ಟಿರುವುದರಿಂದ ನಾನು ಅವರಿಗೆ ಅಭಿನಂದಿಸುತ್ತೇನೆ. ಪ್ರೀ–ಮೆಟ್ರಿಕ್ ಹಾಸ್ಟೆಲ್‌ನಲ್ಲಿ ಹುಡುಗರ ಪ್ರವೇಶ ಸಂಖ್ಯೆಯನ್ನು 75 ರಿಂದ 100 ಕ್ಕೆ ಏರಿಸಲಾಗಿದೆಯೆಂದು ಹೇಳಿದ್ದಾರೆ. ಹುಡುಗರಿಂದ ಪ್ರವೇಶ ಕೋರಿ 131 ಅರ್ಜಿಗಳು ಬಂದಿರುವುದರಿಂದ ಹಾಸ್ಟೆಲ್‌ನಲ್ಲಿ ಪ್ರವೇಶ ಅವಕಾಶವನ್ನು 125 ಹುಡುಗರಿಗೆ ಕಲ್ಪಿಸಬೇಕು ಹಾಗೂ ಹೆಣ್ಣು ಮಕ್ಕಳ ಪ್ರೀ–ಮೆಟ್ರಿಕ್ ಹಾಸ್ಟೆಲ್‌ನಲ್ಲಿ ಪ್ರವೇಶ ಸಂಖ್ಯೆಯನ್ನು 55 ರಿಂದ 75ಕ್ಕೆ ಏರಿಸಲಾಗಿದೆಯೆಂದು ಹೇಳಿದ್ದಾರೆ. ಇಲ್ಲೂ ಸಹ 131 ಅರ್ಜಿಗಳು ಬಂದಿರುವುದರಿಂದ ಹಾಸ್ಟೆಲ್‌ನಲ್ಲಿ ಪ್ರವೇಶ ಅವಕಾಶವನ್ನು 100ಕ್ಕೆ ಏರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಹಳೇಬೀಡಿನಲ್ಲಿರತಕ್ಕಂಥ ಹಾಸ್ಟೆಲ್‌ನಲ್ಲಿ ಹುಡುಗರ ಸ್ಟ್ರೆಂಗ್ತ್‌ನ್ನು ಏರಿಸತಕ್ಕಂಥ ಅಗತ್ಯವಿಲ್ಲ. ಇದರ ಜೊತೆಗೆ ಅದು ಮೀಸಲು ಕ್ಷೇತ್ರವಾಗಿದ್ದರೂ ಪಟ್ಟಣದಲ್ಲಿ ಪೋಸ್ಟ್ ಮೆಟ್ರಿಕ್ ಹಾಸ್ಟೆಲ್ ಇಲ್ಲದೇ ಇರುವುದರಿಂದ 50 ಹುಡುಗರಿಗೆ ಅವಕಾಶ ಮಾಡಿಕೊಡುವ ಒಂದು ಪೋಸ್ಟ್ ಮೆಟ್ರಿಕ್ ಹಾಸ್ಟೆಲ್‌ನ್ನು ಪ್ರಾರಂಭ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ:- ಮಾನ್ಯ ಅಧ್ಯಕ್ಷರೆ, ಬೇಡಿಕೆ ಮತ್ತು ಅಗತ್ಯಕ್ಕೆ ತಕ್ಕಂತೆ ಇಡೀ ರಾಜ್ಯದ ಎಲ್ಲಾ ಹಾಸ್ಟೆಲ್‌ಗಳಲ್ಲಿ ಸಂಖ್ಯೆಯನ್ನು ಹೆಚ್ಚಿಸಲಾಗಿದೆ. ಆದರಲ್ಲೂ ಮಾನ್ಯ ಗೌರವಾನ್ವಿತ ಸದಸ್ಯರ ಕ್ಷೇತ್ರದಲ್ಲಿ ಎಲ್ಲಾ ಕ್ಷೇತ್ರಗಳಿಗಿಂತ ಹೆಚ್ಚಿನ ವಿದ್ಯಾರ್ಥಿಗಳಿಗೆ ಪ್ರವೇಶ ಅವಕಾಶವನ್ನು ಕಲ್ಪಿಸಲಾಗಿದೆ. ಬಹಳಷ್ಟು ಹಾಸ್ಟೆಲ್‌ಗಳಿಗೆ ಸ್ವಂತ ಕಟ್ಟಡ ಇಲ್ಲದೆ ಬಾಡಿಗೆ ಕಟ್ಟಡಗಳಲ್ಲಿ ನಡೆಸುತ್ತಿರುವುದರಿಂದ ಸ್ಥಳಾವಕಾಶದ ಅಭಾವದ ಸಮಸ್ಯೆ ಇರುವುದರಿಂದ ಸರ್ಕಾರ ಬಹಳ ಇಕ್ಕಟ್ಟಿಗೆ ಸಿಲುಕಿದೆ. ಆದರೂ ಸಹ ಪ್ರತಿಯೊಂದು ಹಾಸ್ಟೆಲ್‌ನಲ್ಲಿ 25 ಹುಡುಗರ ಸಂಖ್ಯೆಯನ್ನು ಹೆಚ್ಚು ಮಾಡಲಾಗಿದೆ. ಇನ್ನೂ ಬೇಡಿಕೆ ಇದ್ದರೆ, ಅದನ್ನು ಪರಿಶೀಲಿಸಲಾಗುವುದು.

ಶ್ರೀ ಹೆಚ್.ಕೆ. ಕುಮಾರಸ್ವಾಮಿ:- ಹಾಸ್ಟೆಲ್‌ಗಳಿಗೆ ಕಟ್ಟಡದ ಕೊರತೆ ಇದೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ನಾನು ಹೇಳಿರುವ ಬಾಯ್ಸ್ ಹಾಸ್ಟೆಲ್ ಬಿಲ್ಡಿಂಗ್‌ನಲ್ಲಿ ಫಸ್ಟ್ ಫ್ಲೋರ್ ಹಾಗೇ ಖಾಲಿ ಇದೆ. ಈ ಫ್ಲೋರ್‌ನಲ್ಲಿ 10 ಕೊಠಡಿಗಳು ಖಾಲಿ ಇವೆ, ಮತ್ತು ವಿದ್ಯಾರ್ಥಿನಿಯರ ಹಾಸ್ಟೆಲ್‌ನಲ್ಲೂ 6 ಕೊಠಡಿಗಳು ಖಾಲಿ ಇವೆ, ಅದನ್ನು ಸಂಬಂಧಪಟ್ಟ ಅಧಿಕಾರಿಗಳು ಬಂದು ನೋಡಿದರೆ ಗೊತ್ತಾಗುತ್ತದೆ.

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ:- ಅದನ್ನು ಪರಿಶೀಲನೆ ಮಾಡುತ್ತೇನೆ.

ಅಧ್ಯಕ್ಷರು:- ಶ್ರೀ ಕೆ. ಜಯರಾಮ ಶೆಟ್ಟರ ಚುಕ್ಕೆ ಗುರುತಿನ 287 (1754) ಪ್ರಶ್ನೆಗೆ ಮಾನ್ಯ ಸಚಿವರು ಉತ್ತರ ಕೊಡಲು ಸಮಯ ಕೇಳಿದ್ದಾರೆ.

ವಿಷಯ:- ಧಾರಾವಾಡ ರೈಲ್ವೇ ನಿಲ್ದಾಣದ ಬಳಿ ರೈಲ್ವೇ ಕ್ರಾಸ್ ಬಂದ್.

283 (1747) **ಶ್ರೀ ಚಂದ್ರಕಾಂತ ಬೆಲ್ಲದ(ಧಾರವಾಡ):-** ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ರೈಲ್ವೇ ಸ್ಟೇಷನ್ ಹತ್ತಿರ ಬ್ರಾಡ್‌ಗೇಜ್ ಬದಲಾವಣೆ ಕಾರ್ಯದಿಂದ ರೈಲ್ವೇ ಕ್ರಾಸ್ ಬಂದ್ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಅದರಿಂದ ಸುತ್ತಲಿನ ಜನರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಇ) ಧಾರವಾಡ ಮಹಾನಗರ ಸಭೆಯವರು 'ಓವರ್ ಬ್ರಿಡ್ಜ್' (ರೈಲ್ವೇ ಮಾರ್ಗದ ಮೇಲಿನ ರಸ್ತೆ) ಅಗತ್ಯವಿದೆಯೆಂದು ರೈಲ್ವೇ ಇಲಾಖೆಯವರಿಂದ ಎಸ್ಟಿಮೇಟ್ ಮಾಡಿಕೊಟ್ಟಿರುವುದು ಸರಿಯೆ? ಹಾಗಾದರೆ ಅದರ ಮೊತ್ತವೆಷ್ಟು?

ಈ) ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಹೋಗಲು ಹಾಗೂ ಬೆಳೆದಿರುವ ಮಹಾನಗರ ಅವಶ್ಯಕತೆಯಿಂದ ಈ ರೈಲ್ವೇ ಬ್ರಿಡ್ಜ್ ಅವಶ್ಯಕತೆ ಇರುವುದರಿಂದ ರಚಿಸಿ ಕೊಡಲಾಗುವುದೇ?